ಸನ 1894—95ನೇ ಇಸವಿ ಅರ್ಜಿ ನಂಬರ 316.

ಮೃತಪಟ್ಟ ಕಂಬೀಲಿಂಗಂಣನವರ ಆಸ್ತೀ ವಿಷಯದಲ್ಲಿ—

ಅರ್ಜಿದಾರು, ಮಲ್ಲಂಣನವರು, ಮೃತಪಟ್ಟ ಸದರೀ ಲಿಂಗಂಣನವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಕೃಷ್ಣರಾಜಮೊಹಲ್ಲಾ ಸೊಪ್ಪುನಕೇರೀ ಸ್ಥಳದ ಸದರೀ ಮಲ್ಲಂಣನವರು, ಸದರೀ ವಾಸಸ್ಥರಾಗಿ ಮೃತಪಟ್ಟ ಲಿಂಗಂಣನವರ ಜೆಂದಗಿ ಬಗ್ಯಾಗಿ ಬರತಕ್ಕ 300 ರೂಪಾಯಿ ಸೂಲವನ್ನು ವಸೂಲ ಮಾಡುವದಕ್ಕೆ ಸನ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮಲ್ಲಂಣನವರ ಅರ್ಜಿಯನ್ನು ಸನ 1895ನೇ ಇಸವಿ ಮಾರ್ಚಿ ತಿಂಗಳ ತಾರೀಖು 22ರಲ್ಲು ಕೇಳಿ ಸರಟಿಫಿಕೇಟ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಿಂಗಂಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ 1894—95ನೇ ಇಸವಿ ಅರ್ಜಿ ನಂಬರ 317.

ಮೃತಪಟ್ಟ ಕಾಳೀ ತಿಮ್ಮೇಗವ್ವಡರ, ಮಾದಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜಿದಾರು, ನಿಂಗಯ್ಯ ಮೈನರ, ಗಾರ್ಡಿಯರ್ ಸೋದರಮಾವ ಹೊಂಬಾಳೇಗವ್ವಡರು, ಮೃತಪಟ್ಟ ಸದರೀ ಮಾದಯ್ಯನವರಿಗೆ ಮೈನರ, ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಣದ ತಾಲ್ಲೂಕು ಪಟ್ಟಸೋಮನಹಳ್ಳಿ ಸ್ಥಳದ ಡಿಟೋ ಹೊಂಬಾಳೇಗವ್ವಡರು, ಸದರೀ ತಾಲ್ಲೂಕು ಕ್ಯಾತನಹಳ್ಳಿ ವಾಸಸ್ಥರಾಗಿ ಮೃತಪಟ್ಟ ಮಾದಯ್ಯನವರ ಜೆಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿ ಸೂಲವನ್ನು ವಸೂಲ ಮಾಡುವದಕ್ಕೆ ಸನ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹೊಂಬಾಳೇಗವ್ವಡರ ಅರ್ಜಿಯನ್ನು ಸನ 1895ನೇ ಇಸವಿ ಮಾರ್ಚಿ ತಿಂಗಳ ತಾರೀಖು 22ರಲ್ಲು ಕೇಳಿ ಸರಟಿಫಿಕೇಟ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಾದಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ 1895ನೇ ಇಸವಿ ಫಿಬ್ರವರಿ ತಿಂಗಳ 18ನೇ ತಾರೀಖಿನಲ್ಲಿ ಕೋರ್ಟ ಮೊಹರ ನಿಸಿ ನಮ್ಮ ದಸ್ತಖತ್ತೂಡನೆ ಕೊಡೋಣಾಗಿದೆ.

ಸಿ. ಕೈಸ,
ಡಿಸ್ಟ್ರಿಕ್ಟ ಜಡ್ಜ.

ಶಿವಮೊಗ್ಗಾ ಡಿಸ್ಟ್ರಿಕ್ಟ.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ.

ತಾರೀಖು 25ನೇ ಫಿಬ್ರವರಿ 1895.

1878ನೇ ಇಸವಿ ಫಾರೆಸ್ಟ ರೂಲ್ಸ 37ನೇ ಸೆಕ್ಷನ ಅನುಸಾರಿಸಿ, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,- ತೀರ್ಥಹಳ್ಳಿ ತಾಲ್ಲೂಕು ಮೇಲಿನ ಕುರುವಳ್ಳಿ ಗ್ರಾಮದ ಸಮೀಪ ತುಂಗಾನದಿಯಲ್ಲಿ ಈ ಕೆಳಗೆ ಕಾಣಿಸಿರುವ ನಾಟಾ ತುಂಡುಗಳು ತೇಲಿ ಬಂದು ಸಿಕ್ಕಿರುತ್ತವೆ.

ಇದಕ್ಕೆ ಹಕ್ಕುದಾರಿ ಇರತಕ್ಕವರು ಈ ಇಸ್ತಿಹಾರ ತಾರೀಖು ಲಾಗಾಯತು ಯರಡು ತಿಂಗಳ ಮಳಗಾಗಿ ಶಿವಮೊಗ್ಗಾ ಡಿಸ್ಟ್ರಿಕ್ಟ ಫಾರೆಸ್ಟ ಅಸಿಸ್ಟೆಂಟ ಕನಸರವೇಟರವರ ರೂಬರೂಬ ಖುದ್ದಾಗಿ ಆಗಲಿ ಯಾ ಕೃಮವಾಗಿ ಅಧಿಕಾರ ಪಡದ ಮುಖ್ತಾರೀಕನ ಮೂಲಕವಾಗಲಿ ಹಾಜರ ಆಗಿ ತಮ್ಮ ಹಕ್ಕನ್ನು ಸ್ಥಿರಪಡಿಸಿಕೊಳ್ಳಬೇಕು. ತಪ್ಪಿದಲ್ಲಿ ಸದರೀ ತುಂಡುಗಳು ಸರಕಾರಕ್ಕೆ ಕೇರಿಸಲ್ಪಟ್ಟು ಹರಾಜು ಮಾಡಲ್ಪಡುವದು.

ನಂಬರ.	ಜಾತಿ.	ಅಳತೆ.			
		ಲಾಂಬಿ ಅಡಿ.	ರುಂದಿ ಅಡಿ.	ಮಟ್ಟು ಅಡಿ.	
1	ಮಿತಿ ..	7½	1	½	
2	ಡಿಟೋ ..	6¼	¾	½	
3	ಡಿಟೋ ..	3	1½	1	
4	ಡಿಟೋ ..	4	1½	½	
5	ಡಿಟೋ ..	4	1	1	

ಸಿ. ನಾರಾಯಣರಾವ, ಫಾರೆಸ್ಟ ಅಸಿಸ್ಟೆಂಟ ಕನಸರವೇಟರ.